**8 ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿ.ಸಿ.ನಂ.16693/2020**

**ಸಿಡಬ್ಲ್ಯೂ-15, ಪಿಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀ ಮಿಥುನ್ ಶಿಲ್ಪಿ ವಿ ಜೆ |
| ತಂದೆ/ಗಂಡನ ಹೆಸರು | - | ಲೇಟ್ ವೆಂಕಟಸ್ವಾಮಿ |
| ವಯಸ್ಸು | - | 47 ವರ್ಷ |
| ಕೆಲಸ | - | ಪಿಐ, ಸಿಐಡಿ, ಬೆಂಗಳೂರು |
| ವಾಸ | - | ಆಡುಗೋಡಿ, ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 05-08-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕರವರಿಂದಃ**

ನಾನು ಆರ್ ಟಿ ನಗರ ಪೊಲೀಸ್ ಠಾಣೆಯಲ್ಲಿ ಜುಲೈ 2019 ರಿಂದ ಜನವರಿ 2021 ವರೆಗೂ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.04-03-2020 ರಂದು ಆರ್ ಟಿ ನಗರ, ಎಲ್ ಡಿ ಬ್ಲಾಕ್ 4 ಸೀಸನ್ ಹೋಟೆಲ್ ಹಿಂಭಾಗದ ರಸ್ತೆಯಲ್ಲಿ ಸುಮಾರು 5 ಜನ ಆಸಾಮಿಗಳು ಸಾರ್ವಜನಿಕರಿಂದ ಹಣ ಮತ್ತು ವಡವೆಗಳನ್ನು ದರೋಡೆ ಮಾಡಲು ಸಂಚು ರೂಪಿಸಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ನಾನು ಸಿಬ್ಬಂದಿ ಮತ್ತು ಪಂಚರು ದಾಳಿ ಮಾಡಿ 3 ಜನ ಆಸಾಮಿಗಳನ್ನು ಹಿಡಿದುಕೊಂಡಿರುತ್ತೇವೆ. ಈ ಪ್ರಕರಣದಲ್ಲಿ ಸೈಯದ್ ಸುಹೇಲ್ ಎಂಬ ಆರೋಪಿಯನ್ನು ಹಿಡಿದುಕೊಂಡು ಆತನಿಂದ ಒಂದು ಖಾರದಪುಡಿ ಪೊಟ್ಟಣ ಮತ್ತು ನೈಲಾನ್ ಅಗ್ಗವನ್ನು ವಶಕ್ಕೆ ಪಡೆದು ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಠಾಣೆಗೆ ಬಂದು ವರದಿಯನ್ನು ನೀಡಿರುತ್ತೇನೆ. ನನ್ನ ವರದಿಯನ್ನು ಚಾಸಾ 16 ರವರಿಗೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 5 ನೇ ಆರೋಪಿಯನ್ನು ನೋಡಿ ಸಾಕ್ಷ ಗುರ್ತಿಸಿರುತ್ತಾರೆ. 1 ನೇ ಆರೋಪಿ ಪತ್ತೆಯಾಗಿರುವುದಿಲ್ಲ.

**ಪಾಟೀ ಸವಾಲು 5 ನೇ ಆರೋಪಿ ಪರ ಶ್ರೀಯುತ ಕೆ ವಿ ಬಿ ವಕೀಲರಿಂದಃ**

ದಿ.04-03-2020 ರಂದು 5 ನೇ ಆರೋಪಿಯನ್ನು ಎಲ್ ಅಂಡ್ ಡಿ ಬ್ಲಾಕ್ ನಲ್ಲಿ ಹಿಡಿಯುವಾಗ ಪಂಚಸಾಕ್ಷಿಗಳಿಗೆ ನೋಟಿಸನ್ನು ಮುಂಚಿತವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ದಿನ ಸದರಿ ಸ್ಥಳಕ್ಕೆ ನಾನಾಗಲೀ ಸಿಬ್ಬಂದಿಯಾಗಲೀ ಪಂಚಸಾಕ್ಷಿಯಾಗಲೀ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನ 5 ನೇ ಆರೋಪಿಯ ವಶದಿಂದ ಖಾರದ ಪುಡಿ ಮತ್ತು ನೈಲಾನ್ ಅಗ್ಗವನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಂತರ ಚಾಸಾ

16 ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಆರೋಪಿಯನ್ನು ನಾನು ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ .**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**8 ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಬೆಂಗಳೂರು ನಗರ.**